ನನ್ನೆದುರೇ ಬಿಸಾಡಿ, ಪರಿಚಯದ ನೆಪದಲ್ಲಿ ನನ್ನನ್ನು ತಮ್ಮ ಶಬ್ದಭಂಡಾರದ ಅಷ್ಟೂ ಆಲಂಕಾರಿಕ ಪದಗಳನ್ನು ಬಳಸಿ ಅನಗತ್ಯವಾಗಿ ವಾಚಾಮಗೋಚರ ಹೊಗಳಿ ಹೊನ್ನಶೂಲಕ್ಕೇರಿಸಿ 'ಈಗಾಗಲೇ ಊಟದ ಸಮಯ ಮೀರಿರುವುದರಿಂದ ಅತಿಥಿಗಳು ಒಂದೆರಡು ಮಾತುಗಳನ್ನು ಆಡುವ ಮೂಲಕ ತಮ್ಮ ಭಾಷಣವನ್ನು ಆದಷ್ಟು ಸಂಕ್ಷಿಪ್ತವಾಗಿ ಮುಗಿಸಬೇಕಾಗಿ ಕೇಳಿಕೊಳ್ತೀನಿ' ಅಂದರು. ಮೇಲಾಗಿ 'ಹಸಿದವನಿಗೆ ಉಪದೇಶ ಕೊಡಬೇಡ ಅಂತ ಬುದ್ಧ ಹೇಳಿದ್ದಾನೆ' ಅಂತ ಮೇಲಿಂದ ಒಗ್ಗರಣೆ ಬೇರೆ ಹಾಕಿದರು! ನನ್ನ ಗತಿಯೇನಾಯ್ತೆಂದು ನಿಮಗೆ ಇನ್ನು ಬಿಡಿಸಿಹೇಳಬೇಕಿಲ್ಲ. ಅಲ್ಲಿಂದ ಕಲಿತ ಪಾಠದಿಂದ ನಿಮ್ಮಲ್ಲಿ ನಾನು ಮಾಡಿಕೊಳ್ಳುವ ಮನವಿ ಇಷ್ಟೇ: ಆದಷ್ಟು ಮಟ್ಟಿಗೆ ನಿರೂಪಕರ ಪೂರ್ವಾಪರ ತಿಳಿದುಕೊಂಡೇ ಕಾರ್ಯಕ್ರಮಕ್ಕೆ ಎಂಟರ್ ದಿ ಡ್ರ್ಯಾಗನ್ ಆಗಿರಿ!

ಇನ್ನೊಮ್ಮೆ ಒಂದು ಕಿರಿಯ ಪ್ರಾಥಮಿಕ ಶಾಲಾ ಕಾರ್ಯಕ್ರಮಕ್ಕೆ ಅಲ್ಲಿಯ ಶಾಸಕ ಮತ್ತು ಜಿ.ಪಂ. ಸದಸ್ಯ ಬಂದಿದ್ದರು. ನಿರೂಪಕ ಆ ಇಬ್ಬರು ಗಣ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು "ಮಕ್ಕಳೇ ಇವತ್ತು ನಿಮ್ಮ ಶಾಲೆಯ ವೇದಿಕೆ ಮೇಲೆ ನೀವು ಎರಡು ಹುಲಿಗಳನ್ನು ನೋಡ್ತಾ ಇದ್ದೀರಿ" ಅಂದ. ಅವರಿಬ್ಬರು ಒಳಗೊಳಗೇ ಇಷ್ಟಗಲವಾದರು. ಹುಲಿ ಹಲ್ಲು ಉಜ್ಜೋದಿಲ್ಲ, ತಿಕಾನೂ ತೊಳ್ಕೊಳ್ಳದಿಲ್ಲ ಅನ್ನೋದನ್ನೂ ಮರೆತು ತಮ್ಮನ್ನು ಮನುಷ್ಯ ಮಟ್ಟದಿಂದ ಕಾಡುಪ್ರಾಣಿಯ ಮಟ್ಟಕ್ಕೆ ಡಿ–ಗ್ರೇಡ್ ಮಾಡಿದ ಆ ನಿರೂಪಕನನ್ನು ಮೆಚ್ಚುಗೆಯಿಂದ ನೋಡಿದರು. ಇದು ಇಷ್ಟಕ್ಕೇ ಮುಗಿದಿದ್ದರೆ ಸರಿಯಿತ್ತು. ನಿರೂಪಕನಿಗೆ ಮಕ್ಕಳು ತನ್ನ ಮಾತನ್ನು ಗ್ರಹಿಸಿದ ಬಗ್ಗೆ ಅನುಮಾನವಿತ್ತೆಂದು ಕಾಣ್ತದೆ, ಪುನಃ ಕೇಳಿದ "ಕಾಣ್ತಾ ಇದಾವಲ್ಲ?" ಅಂತ. ಮಕ್ಕಳೆಲ್ಲ ಒಕ್ಕೊರಲಿನಲ್ಲಿ ಚೀರುತ್ತ ಕೈಯೆತ್ತಿ ಅಲುಗಾಡಿಸಿ "ಇಲ್ಲ" ಎಂದು ಧ್ವನಿಮತ ನೀಡಿ ಅಷ್ಟೂ ಮಂದಿಯ ಮುಖಭಂಗ ಮಾಡಿಬಿಟ್ಟರು! ಅದಕ್ಕೇ ಹೇಳೋದು ಸಭಿಕರು ಯಾರೆಂಬ ಬಗ್ಗೆಯೂ ನಿರೂಪಕನಿಗೆ ಎಚ್ಚರವಿರಬೇಕು. ವಾಚ್ಯಾರ್ಥ ಪದದ ಜಾಗದಲ್ಲಿ ಸೂಚ್ಯಾರ್ಥದ ಪದವನ್ನೂ; ಸೂಚ್ಯಾರ್ಥದ ಪದದ ಜಾಗದಲ್ಲಿ ಗೂಢಾರ್ಥದ ಪದವನ್ನೂ ಹಾಕಿ ನಗೆಪಾಟಲಿಗೀಡಾಗಬಾರದು ಅಂತ.

ನಮ್ಮಲ್ಲೊಬ್ಬ ಪ್ರಿನ್ಸಿಪಾಲರಿದ್ದಾರೆ. ಒಳ್ಳೊಳ್ಳೆ ಗೆಸ್ಟ್‌ಗಳನ್ನು ಕಾಲೇಜಿಗೆ ಕರೆಸುತ್ತಾರೆ. ಅವರಿಗೆ ನಿರೂಪಣೆಯ ಹುಚ್ಚು. ಹುದ್ದೆಯ ಕಾರಣಕ್ಕಾಗಿ ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡರೂ, ಹುಚ್ಚಿನ ಕಾರಣಕ್ಕೆ ನಿರೂಪಣೆಯ ಜವಾಬ್ದಾರಿಯನ್ನು ವಿದ್ಯಾರ್ಥಿಗಳಿಗೆ ಬಿಟ್ಟುಕೊಡದೆ ತಾವೇ ವಹಿಸಿಕೊಳ್ಳುತ್ತಾರೆ. ಒಮ್ಮೆ ನಮ್ಮೂರಿಗೆ ಎಪಿಜೆ ಅಬ್ದುಲ್ ಕಲಾಮ್ ಬಂದಿದ್ದರು. ಸ್ಟಾರ್ ನಿರೂಪಕ ತಾವೆಂಬ ಭ್ರಮೆಯ ಇವರು "ಅಂಥಾ ಸೈಂಟಿಸ್ಟ್ ಬಂದಾರೆ. ನಮ್ ಜನ ಹೋಗಾದೇ ಇಲ್ಲಲ್ಲರೀ. ಛೇ ಏನ್ ಜನಾರೀ" ಅಂದು ಥೂಗುಟ್ಟಿದರು. ನೋಡಿದರೆ ತಾವೇ ಹೋಗಿಲ್ಲ. ಸಾಲದ್ದಕ್ಕೆ "ಥೂ ಏನ್ ನಿರೂಪಣೆರೀ ಅವನದು. ಇಡೀ ಕಾರ್ಯಕ್ರಮನೇ ಗಬ್ಬೆಬ್ಬಿಸಿಬಿಟ್ಟನಂತೆ" ಅಂತ ವೃತ್ತಿಮಾತ್ಸರ್ಯದ ಕಾಮೆಂಟು ಬೇರೆ ಮಾಡಿದರು. ಆ ನಿರೂಪಣೆಯ ಚಾನ್ಸು ಗಿಟ್ಟಿಸಿಕೊಂಡ ಮತ್ತೊಬ್ಬರೋ ಕಾರ್ಯಕ್ರಮದ ಕೊನೆಗೆ ಆಯೋಜಕರು ಸೌಜನ್ಯಕ್ಕೆ ಮಾಡಿದ ಸನ್ಮಾನವನ್ನು 'ಎಪಿಜೆ ಅಬ್ದುಲ್ ಕಲಾಂರಿಂದ ಬೆಸ್ಟ್ ಆ್ಯಂಕರ್ ಅವಾರ್ಡ್' ಎಂದು ಊರು ಮಂದಿಗೆಲ್ಲ ವಾಟ್ಸ್‌ಆ್ಯಪ್ ಮಾಡಿ ಬಿತ್ತಿದರು. ನಿರೂಪಣೆಯನ್ನು ಹುಚ್ಚಾಗಿಸಿಕೊಂಡ ಜನರಲ್ಲಿ ಹೀಗೆ ವಿವಿಧ ವಯೋಮಾನದವರಿರುವಂತೆ, ವಿವಿಧ ಜಾಯಮಾನದವರೂ ಇದ್ದಾರೆ. ಇಂಥ ಅರೆಬರೆ ಜ್ಞಾನದ ನಿರೂಪಕರು ವಿಷಯತಜ್ಞರ ಸಮಯ ತಿಂದು ಹಾಕುವುದು, ಸಭಿಕರ ತಾಳ್ಮೆಯನ್ನು ಪರೀಕ್ಷೆ ಮಾಡುವುದು, ತಮ್ಮ ಇಗೋ ಬೂಸ್ಟ್ ಮಾಡಿಕೊಳ್ಳುತ್ತ ಆತ್ಮಶಾಂತಿ ಪಡೆಯುವುದು ಘೋರವಾಗಿರುತ್ತದೆ. ಇನ್ನೂ ದುರಂತವೆಂದರೆ ಇಂಥವರು ನಿರೂಪಣೆಯ ಜವಾಬ್ದಾರಿ ತಮಗಿದ್ದರಷ್ಟೇ ಕಾರ್ಯಕ್ರಮಕ್ಕೆ ಬರುವುದು. ಇಲ್ಲದಿದ್ದರೆ ಅತ್ತ ತಲೆ ಹಾಕಿಯೂ ಮಲಗುವುದಿಲ್ಲ.